<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

## S.C. No. 282/2025

| ಸಾಕ್ಷಿಯ ಹೆಸರು | ಶ್ರೀ. ಧರಿಯಪ್ಪ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಗುದ್ದಪ್ಪ | 6 | 2 |
| ವಯಸ್ಸು | 65 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **25.02.2026.** | |
| ಉದ್ಯೋಗ | ಸೆಕ್ಯೂರಿಟಿ ಕೆಲಸ | | |
| ವಾಸ ಸ್ಥಳ | ಬಸವನಬಾಗೇವಾಡಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಅನ್ನಪೂರ್ಣ ರವರವನ್ನು ನೋಡಿದ್ದೆ. ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ. ಆರೋಪಿ ಮೃತಳ ಮಗ. ಅನಸನಹಳ್ಳಿ ಗ್ರಾಮದ ಒಂದು ಸೀಮೆಂಟ್ ಫ್ಯಾಕ್ಟರಿಯಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಮೃತಳ ಮಗ ಪ್ರವೀಣ್ ನನ್ನ ಜೊತೆಗೆ ಒಂದು ತಿಂಗಳ ಕೆಲಸ ಮಾಡಿದ. ಸುಮಾರು 1 ವರ್ಷದ ಹಿಂದೆ ನಾನು ಈಸ್ಟ ಪಾಯಿಂಟ್ ಆಸ್ಪತ್ರೆಯಲ್ಲಿ ಅನ್ನಪೂರ್ಣರವರ ಶವವನ್ನು ನೋಡಿರುತ್ತೇನೆ. ಪೊಲೀಸರು ನಮ್ಮ ಸಮಕ್ಷಮ ಶವ ಪಂಚನಾಮೆ ಮಾಡಿದ್ದರು. ಆದರೆ ನಾನು ಶವ ಪಂಚನಾಮೆ ಕಾಲಕ್ಕೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಆ ಹೇಳಿಕೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಅನ್ನಪೂರ್ಣ ರವರು ನಮ್ಮ ಸಂಬಂಧಿಕರು ಎಂದರೆ ಸರಿ ಅಲ್ಲ. ಅನ್ನಪೂರ್ಣ ರವರ ಮಗ ಪ್ರವೀಣ್ (ಆರೋಪಿ) ತನ್ನ ಹೆಂಡತಿ ಜೊತೆಗೆ ಜಗಳ ಮಾಡಿಕೊಂಡು ಆಕೆಯನ್ನು ಬಿಟ್ಟು ತಾಯಿಯ ಜೊತೆಗೆ ವಾಸ ಆಗಿದ್ದು, 10 ವರ್ಷಗಳ ಹಿಂದೆ ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಬಂದಿದ್ದು ನಾನು ಕಿರಣ್

ಮತ್ತು ಪ್ರವೀಣ್ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದಾಗ ಚೀಮಸಂದ್ರ ಗ್ರಾಮದ ಚೆನ್ನಮ್ಮ ರವರ ಮನೆಯಲ್ಲಿ ಬಾಡಿಗೆಗೆ ಇದ್ದಾಗ ಅನ್ನಪೂರ್ಣಮ್ಮ ರವರ ಒಂದನೇ ಮಗ ಕಿರಣ್ ಮೃತಪಟ್ಟದ್ದು ಆತನ ಶವವನ್ನು ಧಫನ್ ಮಾಡಿದ್ದೆವು ಎಂದರೆ ಸರಿ ಅಲ್ಲ. ಪ್ರವೀಣ್ ಆತನ ಹೆಂಡತಿ ಮತ್ತು ಮಕ್ಕಳು ಬಿಟ್ಟಿದ್ದರಿಂದ ಗುಟ್ಕ ಹಾಕಿಕೊಂಡು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಆತನನ್ನು ವಜಾ ಮಾಡಿದ್ದು ದೇವಸ್ಥಾನದ ಆವಾರಣದಲ್ಲಿ ಮಲಗಿಕೊಳ್ಳುತ್ತಿದ್ದ ವಿಚಾರವನ್ನು ಮೃತಳಿಗೆ ಹೇಳಿದ್ದೆವು ಎಂದರೆ ಸರಿ ಅಲ್ಲ. ದಿನಾಂಕ 06.05.2025 ರಂದ ರಾತ್ರಿ 6.00 ಕ್ಕೆ ಅನ್ನಪೂರ್ಣ ಮತ್ತು ಅವರ ಮೊಮ್ಮಗಇಬ್ಬರು ಮೃತಪಟ್ಟಿದ್ದ ವಿಚಾರ ತಿಳಿದು ಹೋಗಿ ನೋಡಿದಾಗ ಅವರು ಮೃತಪಟ್ಟಿದ್ದು ನಿಜವಾಗಿದ್ದು ಅನ್ನಪೂರ್ಣಮ್ಮ ರವರು ಮೊಮ್ಮಗುವನ್ನು ನೋಡಿಕೊಳ್ಳಬೇಕೆಂದು ಬುದ್ದಿಹೇಳಿದ್ದರಿಂದ ಆರೋಪಿ ತನಗೆ ಕ್ಯಾನ್ಸರ್ ಆಗಿದೆ ಎಂದು ಅನುಮಾತನದಿಂದ ಅನ್ನಪೂರ್ಣ ಮತ್ತು ಶಂಭು ಇವರನ್ನು ಯಾರು ನೋಡಿಕೊಳ್ಳುವುದಿಲ್ಲ ಎಂದು ತೀರ್ಮಾನ ಮಾಡಿ ದಿನಾಂಕ 02.05.2021 ರಂದು ಬೆಳಗ್ಗೆ 9.00 ಕ್ಕೆ ನಯಲಾನ್ ಹಗ್ಗದಿಂದ ಕುತ್ತಿಗೆ ಬಿಗಿದು ಸಾಯಿಸುತ್ತಿದ್ದಾಗ ಶಂಭು ಬಂದಿದ್ದರಿಂದ ಆತನನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ಹೊರಟು ಹೋಗಿದ್ದ ಎಂಬ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿ ಅಲ್ಲ. ಸದರಿ ಶವ ಪಂಚನಾಮೆಯನ್ನು ಈಗಾಗಲೇ ನಿಶಾನೆ.ಪಿ. 1 ಎಂದು ಗುರುತಿಸಿದ್ದು ಕಲಂ. 9 ರ ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 1 (ಬಿ) ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ. KMC ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.